ಅರ್ಥವಾಯಿತು. ಸೂಕ್ಷ್ಮ ಸ್ವಭಾವದ ಪತಿಯ ಮನಸ್ಸಿಗೆ ಘಾಸಿಯಾಗಿದೆ ಎಂದರಿವಾಗಿ ಹೊಟ್ಟೆಯಲ್ಲಿ ಹುಟ್ಟಿದ ಸಂಕಟ, ಕೊರಳ ಮೂಲಕ ಹಾಯ್ದು ಕಣ್ಣುಗಳಲ್ಲಿ ಕಂಬನಿ ಮಿಡಿಸಿತು. ಆ ಕ್ಷಣಕ್ಕೆ ಬಸವರಾಜಪ್ಪನ ಮೇಲೆ ಸೀತಮ್ಮನವರಿಗೆ ಕೋಪ ಬಂದರೂ ಅವನು ಆಡಿದ ಮಾತಿನಲ್ಲಿ ಸತ್ಯವಿದೆ ಎಂದು ಅವರ ಒಳಮನಸ್ಸು ಹೇಳಿತು. ಸಿಟ್ಟಿನ ಭರದಲ್ಲಿ ಬಸವರಾಜಪ್ಪ ಕಠೋರವಾಗಿ ಮಾತನಾಡಿರಬಹುದು, ಹೆಂಗರುಳಿನ ಅವನಿಗೂ ಮೇಷ್ಟ್ರ ಮನಸ್ಸು ನೋಯಿಸಿದ್ದಕ್ಕಾಗಿ ಪಶ್ಚಾತ್ತಾಪವಾಗಿರುತ್ತದೆ ಎನ್ನುವ ಭರವಸೆ ಸೀತಮ್ಮನವರ ಮನಸ್ಸಿಗೆ ಸಮಾಧಾನ ತಂದಿತು.

* * *

ರಾಮಚಂದ್ರ ಮೇಷ್ಟ್ರ ಮನಸ್ಸಿಗೆ ನೋವಾಗುವಂತೆ ಬಸವರಾಜಪ್ಪ ಮಾತನಾಡಿದ್ದರ ಹಿಂದೆ ಬಲವಾದ ಕಾರಣವಿತ್ತು. ನಡೆದದ್ದಿಷ್ಟು- ಅಂದು ಬೆಳಗ್ಗೆ ಶಾಲೆಗೆ ಹೋಗಲೆಂದು ತಯ್ಯಾರಾಗಿ ಹೊರಬಂದ ರಾಮಚಂದ್ರ ಮೇಷ್ಟ್ರಿಗೆ ಪಡಸಾಲೆಯಲ್ಲಿ ಕುಳಿತಿದ್ದ ಬಸವರಾಜಪ್ಪ ಕಣ್ಣಿಗೆ ಬಿದ್ದ. ಕಳೆದ ಎರಡು ದಿನಗಳಿಂದ ಬಸವರಾಜಪ್ಪನೊಂದಿಗೆ ಮಾತನಾಡಬೇಕೆಂದು ಕಾಯುತ್ತಿದ್ದ ಮೇಷ್ಟ್ರಿಗೆ ಆ ಘಳಿಗೆಯೇ ಕೂಡಿ ಬಂದಿರಲಿಲ್ಲ. ಎರಡು ದಿನಗಳ ಹಿಂದೆ ಯಾವುದೋ ಕೆಲಸಕ್ಕೆಂದು ಕಲಬುರಗಿಗೆ ಹೋಗಿದ್ದ ಬಸವರಾಜಪ್ಪ ನಿನ್ನೆ ತಡರಾತ್ರಿ ಮನೆಗೆ ಬಂದಿದ್ದ. ಬಸವರಾಜಪ್ಪ ಬರುವುದನ್ನೇ ಕಾಯುತ್ತಿದ್ದ ಮೇಷ್ಟ್ರು ಇಂದು ಅವನು ಕಣ್ಣಿಗೆ ಬಿದ್ದದ್ದೆ ಮಾತಿಗಾರಂಭಿಸಿದರು, 'ಬಸವರಾಜಪ್ಪ ಒಂದು ಸುದ್ದಿ ಕಿವಿಮ್ಯಾಲ ಬಿದ್ದದ. ನಿನ್ನ ನಾಲ್ಕೆಕರೆ ಜಮೀನನ್ಯಾಗ ಸೈಟ್ ಮಾಡಲಿಕತ್ತೀದಿ ಅಂತ ಕೇಳೀನಿ. ಇರೋ ಹೊಲ ಮಾರಿ ಮುಂದೇನು ಮಾಡಬೇಕಂತಿ. ಬಂಗಾರದಂತ ಹೊಲ ಅದಾ. ಭೂಮಿತಾಯಿ ನಿನಗೇನು ಕಡಿಮಿ ಮಾಡ್ಯಾಳಂತ ಮಾರಲಿಕತ್ತಿದಿ. ನಿಮ್ಮಂಥ ರೈತರು ಹೀಂಗ ಕೃಷಿಜಮೀನು ಪರಭಾರೆ ಮಾಡಕೋತ ಹೋದರಿ ಅಂದರ ಜನ ಏನು ಮಣ್ಣು ತಿನ್ನಬೇಕೇನು. ರೈತನನ್ನ ಅನ್ನದಾತ ಅಂತ ಸುಮ್ನೆ ಅಂದಿಲ್ಲ. ಹಸಿದ ಹೊಟ್ಟಿಗೊಳಿಗಿ ತುತ್ತು ನೀಡೋ ಪುಣ್ಯದ ಕೆಲಸ ರೈತ ಮಾಡತಾನ. ನನಗ್ಯಾಕೋ ನೀ ಮಾಡೋ ಕೆಲಸ ಸರಿಕಾಣ್ತಿಲ್ಲ' ಎಂದ ಮೇಷ್ಟ್ರಿಗೆ ಹಿಂದೆಯೇ ತಾವು ಆಡಿದ್ದು ಸ್ವಲ್ಪ ಬಿರುಸಾಯಿತೇನೋ ಅನಿಸಿತು. 'ಮೇಷ್ಟ್ರೇ... ವ್ಯಾಳಕ್ಕ ಸರಿಯಾಗಿ ಮಳಿ ಆಗವಲ್ದು. ಬೆಳಿಬೆಳದು ರೊಕ್ಕ ಕೈಗಿ ಬರೊದರೊಳಗ ಸಾಲ ಅದರ ಎರಡರಷ್ಟಾಗಿರತದ. ಮಣ್ಣಾಗ ಮಣ್ಣಾಗಿ ದುಡಿಯೋದೆ ಆಯ್ತು. ಸುಖಾ ಅನ್ನೋದು ಹಣ್ಯಾಗ ಬರದಿಲ್ಲ. ಈ ಊರಾಗಿನ ದೊಡ್ಡಮಂದಿ ಬ್ಯಾರೆ ರೋಡಿಗಿ ಸಮೀಪದ ಹೊಲ ಅಂತ ಕಣ್ಣ ಹಾಕ್ಯಾರ. ಸುಮ್ಮ ಕೂತರ ಹೊಲ ಕೈಬಿಟ್ಟು ಹೋಗತದ. ದೇವಸ್ಥಾನ ಕಟ್ಟಿಸಬೇಕು ಎರಡು ಎಕರೆ ಹೊಲ ಪುಗ್ಸಟ್ಟೆ ಕೊಡು ಅಂತ ಧೀರೇಂದ್ರ ಗೌಡ ಮತ್ತ ಅಲ್ದಿ ಮಲಕಾಣಿ ಗಂಟು ಬಿದ್ದಾರ. ಇವರು ಕೇಳೋದು ನೋಡಿ ಮಸೀದಿಗೂ ಬೇಕು ಅಂತ ಬೇಡಲಿಕತ್ತಾರ. ಹೀಂಗ ಪುಗ್ಸಟ್ಟೆ ದಾನ ಮಾಡಕೋತ ಹೋದರ ಬೀದಿಗಿ ಬಿದ್ದು ಹೆಂಡತಿ- ಮಕ್ಕಳ ಜೊತಿ ಭಿಕ್ಷಾ ಬೇಡಬೇಕಾಗತದ. ಇದೆಲ್ಲಾ ಉಸಾಬರಿನೇ ಬ್ಯಾಡ ಅಂತ ಹೊಲದಾಗ ಸೈಟ್ ಮಾಡಿ ಮಾರಬೇಕಂತ ವಿಚಾರ ಮಾಡೀನಿ. ಸಿಟ್ಯಾನ ಮಂದಿ ಸೈಟ್ ಖರೀದಿ ಮಾಡಲಿಕ್ಕಿ ತುದಿಗಾಲ ಮ್ಯಾಲ ನಿಂತಾರ. ಬಂದ ರೊಕ್ಕದಾಗ ಸಿಟ್ಯಾಗ ಏನರ ವ್ಯಾಪಾರ ಮಾಡಿ ನಾಲ್ಕು ದುಡ್ಡು ಗಳಿಸಿದರಾಯಿತು' ಎಂದ ಬಸವರಾಜಪ್ಪನ ಮಾತಿನಲ್ಲಿ ನಿಲುವು ಖಚಿತವಾಗಿರುವಂತೆ ಮೇಷ್ಟ್ರಿಗೆ ತೋರಿತು. 'ನಿನ್ನಂಗ ಊರಿನ ರೈತರೆಲ್ಲ ವಿಚಾರ ಮಾಡಿದರ ಕೃಷಿ ಜಮೀನುಗೋಳು ಸೈಟು, ಫ್ಯಾಕ್ಟರಿಗಳಾಗಿ ಬದಲಾಗತಾವ. ವರ್ಷದಿಂದ ವರ್ಷಕ್ಕ ಕೃಷಿ ಜಮೀನು ಕಡಿಮಿ ಆಗಲೀಕತ್ತದ. ಅದಕ್ಕೆ ನೋಡು ಕಾಳುಕಡಿಗಳ ಧಾರಣೆ ಮುಗಿಲು ಮುಟ್ಯಾದ. ನೀ ಮಾಡಿದ ನಿರ್ಧಾರ ಅನ್ನದಾತನ ಹೆಸರಿಗಿ ಮಸಿ ಬಳದಂಗ' ಎಂದು ರಾಮಚಂದ್ರ ಮೇಷ್ಟ್ರು ಸಿಟ್ಟಿನಿಂದ ನುಡಿದರು. ಮೇಷ್ಟ್ರ ಮಾತು ಬಸವರಾಜಪ್ಪನನ್ನು ಕೆರಳಿಸಿತು 'ಅಲ್ರೀ ಮೇಷ್ಟ್ರೆ, ರೈತರು ನಾವೇನು ದುಡಿದು ಇಡೀ ಜಗತ್ತಿಗಿ ಅನ್ನ ಉಣ್ಣಕ್ಕ ನೀಡತೀವಿ ಅಂತ ಆಣಿ ಮಾಡಿವೇನು. ಅನ್ನದಾತ, ದೇಶದ ಬೆನ್ನೆಲುಬು ಅಂತ ದೊಡ್ಡ ದೊಡ್ಡ ಮಾತ ಆಡ್ತೀರಿ. ಆದರ ಅವನ ಕಷ್ಟ ಏನದಾ ಅಂತ ಕೇಳ್ತಿರೇನು. ನೀವು ಹೀಂಗ ರೈತರ ಬಗ್ಗೆ ಚಿಂತಿ ಮಾಡತಿದ್ದರ ಅವರು ನೇಣು ಹಾಕಿಕೊಂಡು ಸಾಯ್ತಿರಲಿಲ್ಲ. ನಿಮಗೇನೋ ಸರ್ಕಾರ ತಿಂಗಳಾ